(xii) ಭೂಮಾಪನ ಇಲಾಖೆಯಲ್ಲಿ ನೇಮಕಾತಿ ಮತ್ತು ಬಡ್ತಿ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ಭೂಮಾಪನ ಇಲಾಖೆಯಲ್ಲಿ ಅಸಿಸ್ಟೆಂಟ್ ಗುಮಾಸ್ತರು ; ಸಬ್ ಅಸಿಸ್ಟೆಂಟ್ ಗುಮಾಸ್ತರುಗಳನ್ನು ತೆಗೆದುಕೊಳ್ಳುವ ಬಗ್ಗೆ No. RDC 39 dated 17-1-84 ಪ್ರಕಾರ ಆದೇಶ ನೀಡಿದ್ದಾರೆ. 1-1-83ರಲ್ಲಿ ಮಾಡಿರುವಂಥ ಸೀನಿಯಾರಿಟಿ ಪಟ್ಟಿಯನ್ನು ಬಿಟ್ಟು ಯಾರಯಾರನ್ನೋ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಈ ಮಧ್ಯೆ ಸರ್ಕಾರ, Guidelines to determine between direct recruitments and promotees ಬಗ್ಗೆ ಸರ್ಕಾರದ ಆರ್ಡರ್ ಇಷ್ಯೂ ಮಾಡಿದ್ದಾರೆ. ಈಗ ಅಲ್ಲಿ 1-1-83ರ ಸೀನಿಯಾರಿಟಿ ಪಟ್ಟಿ ಅಧಾರವಾಗಿಟ್ಟುಕೊಂಡು ನೇಮಕ ಮಾಡಬೇಕೆಂದು ಆರ್ಡರ್ಸ್ ಇಷ್ಯೂ ಮಾಡಿದ್ದಾರೆ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರದವರು ಹೊರಡಿಸಿರುವಂಥ ಆಜ್ಞೆಯ ಆಧಾರದ ಮೇಲೆ ನೇಮಕಗಳು ಮತ್ತು ಪ್ರೋಮೋಷನ್‌ಗಳು ಆಗಬೇಕು. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಿಂದ ಸ್ಪಷ್ಟ ಉತ್ತರ ಬಯಸುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕೂಡಲೇ ವಿವರ ತರಿಸಿ ನೋಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—8-10 ದಿವಸಗಳ ಹಿಂದೆ ಮಾನ್ಯ ಮಂತ್ರಿಯವರನ್ನು ಕಂಡು ಹೇಳಿದ್ದೇನೆ. ಇವತ್ತು ನಾಳೆ ಕಳೆದರೆ ಎಲ್ಲಾ ವ್ಯವಹಾರ ಮುಗಿದು ಹೋಗುತ್ತೆ ; ಸೀನಿಯಾರಿಟಿ ಇರತಕ್ಕವರಿಗೆ ಅನ್ಯಾಯವಾಗುತ್ತದೆ. ತೀವ್ರವಾಗಿ ಮಾನ್ಯ ಮಂತ್ರಿಯವರು ಗಮನಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಇವತ್ತೇ ಇದರ ಬಗ್ಗೆ ಗಮನಕೊಡುತ್ತೇನೆ. ವಿಚಾರತಿಳಿದು ಹೇಳಿಕೆ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮಗೆ ಹೇಳಿಕೆ ಬೇಕಾಗಿಲ್ಲ ಸರ್ಕಾರದ ಆಜ್ಞೆ ಕಳುಹಿಸಿಕೊಡುತ್ತೇನೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(xiii) ಕೆ.ಪಿ.ಸಿ.ಎಸ್. ಯವರು ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

ಶ್ರೀ ಎಂ. ಮಹದೇವ್(ನಂಜನಗೂಡು).—ಅಧ್ಯಕ್ಷರೇ, ಕೆ.ಪಿ.ಎಸ್.ಸಿ. ಯವರು 56 ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ನಮಗೆ ತಿಳಿದಹಾಗೆ ವಾಹನಗಳ ಅಪಘಾತಗಳ ಸಂಖ್ಯೆ ನಮ್ಮ ರಾಜ್ಯದಲ್ಲಿ ಜಾಸ್ತಿಯಾಗುತ್ತಿದೆ. ವಾಹನಗಳ ಅಪಘಾತವನ್ನು ತಪ್ಪಿಸಬೇಕಾದರೆ ಸರಿಯಾದಂಥ ಇನ್ಸ್‌ಪೆಕ್ಟರ್‌ಗಳು ಬೇಕಾಗುತ್ತದೆ. ಇದರಲ್ಲಿ ಟ್ರೈನ್ಡ್ ಆದಂಥ ಜನ ಬೇಕಾಗುತ್ತದೆ. ಆದುದರಿಂದ ಸೆಲೆಕ್ಷನ್ ಮಾಡುವಾಗ ಡಿಪ್ಲೊಮೊ ಇನ್ ಆಟೋ ಮೊಬೈಲ್ ಟೆಕ್ನಾಲಜಿಯಾಗಿರತಕ್ಕವರನ್ನು ನೇಮಿಸಿಕೊಂಡರೆ ವಾಹನಗಳ ಅಪಘಾತಗಳು ಕಡಿವೆಯಾಗುತ್ತದೆ. ಆದರೆ ಇವತ್ತಿನ ದಿವಸ ಡಿಪ್ಲೊಮೊ ಇನ್ ಮೆಕಾನಿಕಲ್ ಆಗಿರತಕ್ಕವರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ, ಆದುದರಿಂದ ಸರ್ಕಾರದವರು ಡಿಪ್ಲೊಮೊ ಆಟೊಮೊಬೈಲ್ ಪಾಸ್ ಆಗಿರತಕ್ಕವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ ಸಾರಿಗೆ ರಾಜ್ಯ ಮಂತ್ರಿಗಳು.—ಯಾವ ಅರ್ಹತೆಯ ಮೇಲೆ ನೇಮಕ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈಗಿರತಕ್ಕ ಬಿ. ಇ. ಮತ್ತು ಡಿಪ್ಲೊಮೊ ಜೊತೆಗೆ ಡಿಪ್ಲೊಮೊ ಇನ್ ಆಟೋಮೊಬೈಲ್ ಆಗಿರತಕ್ಕವರನ್ನೇ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಆದನ್ನು ಸಹ ಸರ್ಕಾರ ಪರ್ಯಾಲೋಚನೆ ಮಾಡುತ್ತದೆ.

(xvi) ಬೆಳಗಾಂ ಜಿಲ್ಲೆಯ ಬರಗಾಲ ಪ್ರದೇಶದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ತೆಗದುಕೊಳ್ಳುವ ಬಗ್ಗೆ

ಶ್ರೀ ಎಂ. ಎಸ್. ಪಾಟೀಲ್(ಸಂಕೇಶ್ವರ).—ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಹಲವಾರು ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ಅಲ್ಲಿ ನಿಜವಾಗಿಯೂ ಭಯಂಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ, ಇದರ ಬಗ್ಗೆ ಮಂತ್ರಿಗಳವರು ಜಿಲ್ಲಾಧಿಕಾರಿಗಳವರಿಗೆ ಮತ್ತು ವಿಭಾಗಾಧಿಕಾರಿಗಳಿಗೆ ವಿಶೇಷವಾದ ಕಾರ್ಯ